ಶ್ರೀ ಹೆಚ್. ಎಂ. ಚೆನ್ನಬಸಪ್ಪ :-- ದೇಶದಲ್ಲಿ ರಸ್ತೆಗಳ ಪ್ರಾಮುಖ್ಯತೆ ಹೆಚ್ಚಿಗೆ ಆಗಬೇಕು ಮತ್ತು ಅದರಲ್ಲೂ ಮಲೆನಾಡಿನಲ್ಲಿ ಹೆಚ್ಚು ಮಳೆಬೀಳತಕ್ಕ ಭಾಗದಲ್ಲಿ ರಸ್ತೆಗಳ ಮತ್ತು ಸೇತುವೆಗಳ ಕೆಲಸ ಹೆಚ್ಚಿಗೆ ಆಗಬೇಕು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಎಲ್ಲವನ್ನೂ ಏಕಕಾಲದಲ್ಲಿ ಮಾಡುವುದು ಕಷ್ಟ. ಈ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು, ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಕೆಲವು ನಿರ್ದಿಷ್ಟ ಕಾಲದೊಳಗೆ ಇವೆಲ್ಲವನ್ನೂ ಉತ್ತಮ ಪಡಿಸಬೇಕೆಂಬುದು ಸರ್ಕಾರದ ಆಶಯವಾಗಿದೆ.

ಶ್ರೀ ಎಂ. ಎಸ್ ಕೃಷ್ಣನ್ :— ಸ್ವಾಮಿ (ಸಿ) ಗೆ ಉತ್ತರವಾಗಿ ಇದು ಲೋಕೋಪಯೋಗಿ ಇಲಾಖೆ ವಶದಲ್ಲಿಲ್ಲ ಎಂದು ಹೇಳುತ್ತಿದ್ದೀರಿ. ಆದರೆ ಇದಕ್ಕೆ ಒಂದು ವಿಶ್ಲೇಷಣೆಕೊಟ್ಟು ಆರ್ಥಿಕ ಪರಿಸ್ಥಿತಿ ಅನುಕೂಲವಾದಹಾಗೆಲ್ಲಾ ಅನುಕೂಲವಾಗುತ್ತದೆ ಎಂದು ಹೇಳಿದ್ದೀರಿ. ಈರೀತಿ ಒಂದು ವಿಶ್ಲೇಷಣೆ ಕೊಟ್ಟಿರುವುದರಿಂದ ಈಗ ತಾವು ತೆಗೆದುಕೊಂಡಿರುವ ತೀರ್ಮಾನದ ಪ್ರಕಾರ ಈಗಿನ ಎಕ್ಸಾನಮಿ ಆರ್ಡರ್‌ನಿಂದ ಯಾವ ಕಾಮಗಾರಿ ಕೆಲಸವಾಗಲಿ, ರಿಪೇರಿಯಾಗಲಿ ಆಗಕೂಡದು ಎನ್ನುವುದು ಅರ್ಥವಾದಂತಾಗುವುದಿಲ್ಲವೇ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :— ರಸ್ತೆ ಕಾಮಗಾರಿ ಕೆಲಸಗಳು ಆಗ ಕೂಡದು ಎಂದು ತೀರ್ಮಾನ ತೆಗೆದುಕೊಂಡಿಲ್ಲ. ಇರತಕ್ಕ ದುಡ್ಡಿನಲ್ಲಿ ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು, ಯಾವುದಕ್ಕೆ ಕಡಿಮೆ ಪ್ರಾಮುಖ್ಯತೆ ಕೊಡಬೇಕು ಎನ್ನುವುದು ಅಷ್ಟೇ ಇರುವುದು.

KALASA—MAGUNDI—BALEHONNUR ROAD

65. SR G. PUTTASWAMY (Mudigere).—

16. Will the the Minister for Public Works and Electricity be pleased to state :—

a) whether it is a fact that on Kalasa –Magundi—Balehonnur road in Mudigere taluk pits have been formed due to recent rainfall ;

(*b*) if so, whether it has come to the notice of the Government that inconvenience has been caused to vehicular traffic on this road ;

(*c*) if so, when this road repair work will be under taken ?

SRI H. M. CHANNABASAPPA (Minister for Public Works and Electricity).

V-, 31'N 73
N 74-21-1-7
(S) 4898

(*a*) Yes

(*b*) Yes

(*c*) Consideration of this is dependent on availability of funds.

ಶ್ರೀ ಜಿ. ಪುಟ್ಟಸ್ವಾಮಿ : ಸ್ವಾಮಿ, ತಾವು (ಅ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ. ಈ ರಸ್ತೆ ರಿಪೇರಿ ಮಾಡಬೇಕು ಎಂದು ಯಾರಿಂದಲಾದರೂ ಮನವಿಗಳು ಬಂದಿವೆಯೇ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ: ಮನವಿ ತಮ್ಮಿಂದಲೂ ಬಂದಿದೆ ಮತ್ತು ಅನೇಕ ಜನರಿಂದಲೂ ಬಂದಿದೆ.

ಶ್ರೀ ಜಿ. ಪುಟ್ಟಸ್ವಾಮಿ : ಸ್ವಾಮಿ, ಜೂನ್ ಅಖೈರ್‌ನಲ್ಲಿ ಮತ್ತು ಜುಲೈ ಮೊದಲ ವಾರದಲ್ಲಿ ಆದಂಥ ಮಳೆಯಿಂದಾಗಿ ಈ ರಸ್ತೆಗಳು ಕೊರಕಲು ಬಿದ್ದು ಬನ್ನುಗಳ ಸಂಚಾರಕ್ಕೆ ಮತ್ತು ಇನ್ನು ಇತರ ಸಂಚಾರಕ್ಕೆ ಅನಾನುಕೂಲವಾಗಿದೆ ಆದುದರಿಂದ ಈಗ ಹಣ ಎಷ್ಟು ಇದೆಯೋ ಅಷ್ಟೇ ಹಣದಲ್ಲಿ ಸರ್ಕಾರದವರು ಈ ರಸ್ತೆಗೆ ಪ್ರಾಮುಖ್ಯತೆ ಕೊಟ್ಟು ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಈ ರಸ್ತೆ ಪಿ ಡಬ್ಲ್ಯೂ. ಡಿ. ಗೆ ಸೇರಿದೆ. ಕ್ರಮಕ್ರಮವಾಗಿ ಇದರ ಕೆಲಸ ನಡೆಯುತ್ತಾ ಇದೆ. ಈ ಬಗ್ಗೆ ಹೆಚ್ಚು ವಿವರ ಹೇಳಬೇಕಾದರೆ ಈಗ 4 ಮೈಲಿ ಆಸ್ಫಾಲ್ಟ್ ಮಾಡಿದ್ದಾರೆ ಮತ್ತು 2 ಮೈಲಿ ಸಬ್‌ಗ್ರೇಡ್ ಇಂಪ್ರೂ ಆಗಿದೆ. ಉಳಿದುದನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ :—ಈಗ ಇದಕ್ಕೆ ಎಸ್ಟಿಮೇಟ್ ಎಷ್ಟು ಆಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಇದರ ರೀಕನ್‌ಸ್ಟ್ರಕ್ಷನ್ ಮಾಡುವುದಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಮತ್ತು ಸಬ್‌ಗ್ರೇಡ್ ಮಾಡುವುದಕ್ಕೆ 1 ಲಕ್ಷ 20 ಸಾವಿರ ರೂಪಾಯಿ ಬೇಕಾಗುತ್ತದೆ ಮತ್ತು ಇದನ್ನು ಆಸ್ಫಾಲ್ಟ್ ಮಾಡುವುದಕ್ಕೆ 3 ಲಕ್ಷ 30 ಸಾವಿರ ರೂಪಾಯಿ ಬೇಕಾಗುತ್ತದೆ. ಒಟ್ಟು ಇದಕ್ಕೆ 5 ಲಕ್ಷ 50 ಸಾವಿರ ರೂಪಾಯಿ ಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ :— ಸ್ವಾಮಿ, ಮೂಡಿಗೆರೆ ತಾಲ್ಲೂಕು ಕಳಸ-ಮಾಗುಂಡಿ-ಬಾಳೆಹೊನ್ನೂರು ರಸ್ತೆ ಏನು ಇದೆ ಇವು ಇತ್ತೀಚಿನ ಮಳೆಯಿಂದಾಗಿ ಕೊರಕಲು ಬಿದ್ದು ಜನಗಳ ಸಂಚಾರಕ್ಕೆ ಉಪಯೋಗಕ್ಕೆ ಬಾರದೇ ಇರುವ ಹಾಗೆ ಇವೆ. ಆದುದರಿಂದ ಈ ರಸ್ತೆಯನ್ನು ತಕ್ಷಣವೇ ರಿಪೇರಿ ಮಾಡಿಸುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :— ಈ ರಸ್ತೆಯಲ್ಲಿ ಹಲವು ಕಲ್ವರ್ಟ್ಸ್ ಕಟ್ಟಬೇಕು ಕಟ್ಟಿರತಕ್ಕಂಥ ಕಲ್ವರ್ಟ್ಸ್ ಬಿದ್ದುಹೋದರೆ ರಿಪೇರಿ ಮಾಡುತ್ತಾರೆ. ಹೊಸದಾಗಿ ಮಾಡುವಂತೆ ಕೆಲಸವನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಹಾಕಿಕೊಂಡು ಮಾಡಬೇಕಾಗುತ್ತದೆ. ಇದು 15 ಮೈಲಿಯೂ ಕೂಡ ಪ್ರಾಮುಖ್ಯವಾದ ರಸ್ತೆ ಎಂದು ಸರ್ಕಾರ ಗಮನಿಸಿದೆ. ಅದಕ್ಕೋಸ್ಕರ ಈಗ 4-5 ಮೈಲಿ ಆಸ್ಫಾಲ್ಟ್ ಮಾಡಿದ್ದಾರೆ. 2 ಮೈಲಿ ಸಬ್‌ಗ್ರೇಡ್ ಇಂಪ್ರೂ ಆಗಿದೆ. ಉಳಿದುದನ್ನು ಒಂದು ಫೇಸ್ಡ್ ಪ್ರೋಗ್ರಾಂನಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಎಂ. ಬಿ. ರಾಮಸ್ವಾಮಿ : ಸ್ವಾಮಿ, (ಸಿ) ಗೆ ಉತ್ತರವಾಗಿ "Consideration of this is dependent on availability of funds" ಎಂದು ಹೇಳಿದ್ದೀರಿ. ಇದಕ್ಕೆ ಯಾವಾಗ ಫಂಡ್ಸ್ ಅವೈಲಬಿಲಿಟಿ ಆಗುತ್ತದೆ ? ಇದು ಪ್ರಾಮುಖ್ಯವಾದ ರಸ್ತೆ ಆದುದರಿಂದ ಇದನ್ನು ಜಾಗ್ರತೆ ಮಾಡಿಸಿಕೊಡುತ್ತೀರಾ ? ಎಷ್ಟು ದಿವಸದಲ್ಲಿ ಈ ಕೆಲಸವನ್ನು ಮಾಡಿಸಿಕೊಡುತ್ತೀರಿ ? ತಾವು ಜನಗಳ ಅನುಕೂಲತೆಗಳನ್ನ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತೀರಾ ಅಥವಾ ಬರೀ ಅವೈಲಬಿಲಿಟಿ ಆಫ್ ಫಂಡ್ಸ್ ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತೀರಾ ? ಜನಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಹೇಳುವುದಾದರೆ ಈ ಕೆಲಸವನ್ನು ತೀವ್ರವಾಗಿ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಜನಗಳಿಗೆ ಅನುಕೂಲ ಮಾಡಿ ಕೊಡುವುದಕ್ಕೋಸ್ಕರವಾಗಿ ಸವಗ್ರವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದನ್ನು ಒಂದು ಫೇಸ್ಡ್ ಪ್ರೋಗ್ರಾಮ್‌ನಲ್ಲಿ ಮಾಡಬೇಕಾಗುತ್ತದೆ. ಅಖಂಡ ಕರ್ನಾಟಕದಲ್ಲಿ ಯಾವುದಕ್ಕೆ ಮೊದಲು ಪ್ರಾಮುಖ್ಯತೆ ಕೊಡಬೇಕು, ಆಮೇಲೆ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಮತ್ತು ಯಾವ ವಿಧವಾದ ರೀತಿಯಲ್ಲಿ ಪ್ರಾಮುಖ್ಯತೆ ಕೊಡಬೇಕೆನ್ನುವುದೇ ಬುದ್ಧಿವಂತಿಕೆ ಎನ್ನುವುದು, ಅದನ್ನು ತಾವು ಕೂಡ ಒಪ್ಪಿಕೊಳ್ಳುತ್ತೀರಿ.

ಶ್ರೀ ಬಿ. ಪುಟ್ಟಸ್ವಾಮಿ : ಯಾವುದಕ್ಕೆ ಮೊದಲನೇ ಆದ್ಯತೆ ಕೊಡಬೇಕೋ ಅದಕ್ಕೆ ಕೊಟ್ಟು ಹಣದ ಸುಧಾರಣೆಯಾದ ತಕ್ಷಣ ಈ ಕೆಲಸಕಾರ್ಯಗಳಿಗೆ ಮೊದಲನೆ ಆದ್ಯತೆ ಕೊಡುತ್ತೀರಾ ಸ್ವಾಮಿ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಇದಕ್ಕಿಂತಲೂ ಮೊದಲು ಸಾಗರ ತಾಲ್ಲೂಕಿನಲ್ಲಿ ಮುಖ್ಯವಾದ ರಸ್ತೆ ಯಾವರೀತಿಯಾಗಿ ಇದೆ ಎನ್ನುವುದನ್ನು ಸರ್ಕಾರ ಮನಗಂಡಿದೆ ಸಾಮಾನ್ಯವಾಗಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಾ ಜಿಲ್ಲೆಗಳಲ್ಲಿ ಹೆಚ್ಚು ಮಳೆ ಆಗುತ್ತದೆ ಆದ್ದರಿಂದ ಅಲ್ಲಿನ ಸೇತುವೆಗಳು ಮತ್ತು ರಸ್ತೆಗಳ ಬಗ್ಗೆ ಅವಶ್ಯಕವಾಗಿ ಮೊದಲು ಗಮನಕೊಟ್ಟು ನೋಡಿಕೊಳ್ಳಬೇಕೆಂಬುದು ಸರ್ಕಾರದ ಗಮನದಲ್ಲಿದೆ.

RESERVATION OF POSTS TO B. Cs ; S.Cs./S.Ts. BY PUBLIC UNDERTAKINGS

85. SRI K. SIDDAIAH (SANTHEMARAHALLY).—

17. Will the Chief Minister be pleased to state :—

The date on which the Government Order of September 1969 with regards to classification; rotation and reservation of posts to Backward Classes, Scheduled Castes and Scheduled Tribes was given effect to by the respective public undertakings (including Corporation and other autonomous bodies) in the State ?

SRI D. DEVARAJ URS, (CHIEF MINISTER) :—The provisions of the Government Order No. GAD 42 SRR 69-1, dated 6th September 1969 are not applicable to appointments in public undertakings including Corporation and other autonomous bodies since the Government Order provides for reservation of posts only in State Civil Services required to be filled by direct recruitment, in favour of Scheduled Tribes, Scheduled Castes and other Backward Classes.